Govt. of Karnataka ಅನುಬಂಧ-ಎ [C.R.P. 67

Deposition Sheets
(R.P. No. 57)
Form No. 4
(Criminal)

**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ,ಶಿರಾ.**

**ಪ್ರಕರಣ ಸಂಖ್ಯೆ: ಸಿ.ಸಿಃ 21/2022**

| ದಿನಾಂಕ 29.01.2024 ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು. | | | |
|---|---|---|---|
| **C.W.** | 3 | **P.W.** | 1 |
| **ಹೆಸರು** | ಮಂಜುನಾಥ | | |
| **ತಂದೆಯ/ಗಂಡನ ಹೆಸರು** | ಗೋವಿಂದಪ್ಪ | | |
| **ವಯಸ್ಸು** | 52 | | |
| **ಉದ್ಯೋಗ** | ಶಿಕ್ಷಕರು | | |
| **ವಾಸ** | ಜ್ಯೋತಿ ನಗರ, ಶಿರಾ | | |

**ಮುಖ್ಯವಿಚಾರಣೆಃ ಎ.ಪಿ.ಪಿ. ರವರಿಂದಃ**

1. ಆರೋಪಿಯನ್ನು ನೋಡಿದ್ದೇನೆ. ಸುಮಾರು 2-3 ವರ್ಷಗಳ ಹಿಂದೆ ನಾನು ಶಿರಾ ನಗರ ಸಭೆಯ ಚುನಾವಣೆಯ ಪ್ರಯುಕ್ತ ಶಿರಾ ಟೌನ್ ಒಳಗೆ ನನ್ನನ್ನು ಅಧಿಕಾರಿಯಾಗಿ ಕರ್ತವ್ಯಕ್ಕೆ ನೇಮಿಸಿದ್ದು, ಚಾ,ಸಾ.1 ಮತ್ತು 2 ರವರು ಚುನಾವಣಾ ಅಧಿಕಾರಿಗಳಾಗಿ ಸೇವೆ ಸಲ್ಲಿಸುತ್ತಿದ್ದು, ಶಿರಾ ನಗರದ ಉರ್ದು ಶಾಲೆಯೊಂದರಲ್ಲಿ ಮತ ನಡೆಯುವಾಗ 11.30-12.00 ಗಂಟೆ ಸಮಯದಲ್ಲಿ ಆರೋಪಿಯು ಬಂದು ಮತದಾನ ಮಾಡಿ ಹೋಗುತ್ತಿದ್ದಾಗ, ಅಲ್ಲಿದ್ದ ಪೋಲಿಂಗ್ ಏಜೆಂಟ್ ರವರು ಆರೋಪಿಯ ಮತ ಇಲ್ಲದಿದ್ದರೂ ಮತ ಚಲಾಯಿಸಿ ಬಂದಿದ್ದರು ಎಂದು ಹಿಡಿದುಕೊಂಡಿದ್ದು, ಅಲ್ಲಿ ಗುಂಪು ಸೇರಿ ಗಲಾಟೆ ನಡೆಯುತ್ತಿದ್ದು, ಜನ ದಟ್ಟಣೆ ಹೆಚ್ಚಾಗಿದ್ದ ಕಾರಣ ಬ್ಯಾಲೆಟ್ ಟೋಕನ್ ನ್ನು ಜನರಿಂದ ಪಡೆದುಕೊಂಡು ಕೆಲಸ ಸರಾಗವಾಗುವಂತೆ ಮಾಡಿರುತ್ತೇನೆ, ಅದನ್ನು ಹೊರತುಪಡಿಸಿ ಬೇರೆ ವಿಷಯ ಗೊತ್ತಿಲ್ಲ, ನಾನು ಪೊಲೀಸರಿಗೆ ಯಾವುದೇ ಹೇಳಿಕೆ ಕೊಟ್ಟಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿದಾರರು ಅಭಿಯೋಜನೆಯ ಪ್ರಕರಣಕ್ಕೆ ಸಹಕರಿಸಿದ ಕಾರಣ ಮಾನ್ಯ ಸ.ಸ.ಆ ರವರ ಕೋರಿಕೆಯ ಮೇರೆಗೆ ಸಾಕ್ಷಿಯನ್ನು ಭಾಗಶಃ **ಪ್ರತಿಕೂಲ ಸಾಕ್ಷಿ** ಎಂದು ಪರಿಗಣಿಸಿ ಪಾಟೀಸವಾಲಿಗಾಗಿ ಅನುಮತಿಯನ್ನು ನೀಡಲಾಯಿತು.)

**ಪಾಟೀಸವಾಲುಃ- ಎ.ಪಿ.ಪಿ. ರವರಿಂದಃ**

1. ಶಿರಾ ನಗರ ಸಭಾ ಚುನಾವಣೆಯ ಪ್ರಯುಕ್ತ 26.12.2021 ಮತ್ತು 27.12.2021 ರಂದು ಚುನಾವಣೆಯ ದಿನ ನಿಗದಿ ಮಾಡಿದ್ದು, ನನ್ನನ್ನು ಚುನಾವಣೆಯ ಪ್ರಯುಕ್ತ ಅಸರ್ ಮೊಹಲ್ಲಾದ ಪಿ.ಎಸ್. ಸಂಖ್ಯೆ 33, ವಾರ್ಡ್ ಸಂಖ್ಯೆ 23 ರ ಚುನಾವಣಾ ಕರ್ತವ್ಯಕ್ಕೆ ನಾನು, ಚಾ.ಸಾ. 4 ಮತ್ತು 5 ರವರು ಪೊಲಿಂಗ್ ಆಫೀಸರ್ ಆಗಿದ್ದು, ಚಾ.ಸಾ.1 ರವರು ಪಿ.ಓ. ಆಗಿದ್ದು, ಚಾ,ಸಾ.2 ರವರು ಎ.ಪಿ.ಆರ್.ಓ ಆಗಿದ್ದು, ನಾವು ದಿನಾಂಕ 26.12.2021 ರಂದು ಚುನಾವಣಾ ಸಾಮ್ರಾಗ್ರಿ ಸಮೇತ ಸರ್ಕಾರಿ ಉರ್ದು ಪ್ರಾರ್ಥಮಿಕ ಪಾಠಶಾಲೆಯಲ್ಲಿ ಉಳಿದುಕೊಂಡಿದ್ದು, ಮರುದಿನ ಬೆಳಗ್ಗೆ 27.12.2021 ರಂದು ಬೆಳಗ್ಗೆ 7.00 ಗಂಟೆಗೆ ಮತದಾನ ಪ್ರಾರಂಭವಾಗಿದ್ದು, ಮಧ್ಯಾಹ್ಞ 2.30 ರ ಸಮಯದಲ್ಲಿ ಆರೋಪಿ ಮತದಾನ ಮಾಡಲು ಬಂದಿದ್ದು, ಆತನ ಕ್ರಮ ಸಂಖ್ಯೆ 427 ಆಗಿದ್ದು, ಅದರಲ್ಲಿ ಹೆಸರು ಮತ್ತು ವಿಳಾಸ ಅಯೂಬ್ ಖಾನ್ ಶರೀಫ್ ಖಾನ್, 54 ವರ್ಷ, ಮನೆ ಸಂಖ್ಯೆ 135(ಎ)IDNO-SYW8812828 ಮತದಾನವಾದ ನಂತರ ಏಜೆಂಟರು ಅಲ್ಲಿಗೆ ಬಂದು ಈತನು ನಕಲಿ ಮತದಾನ ಮಾಡಿದ್ದಾನೆ ಎಂದು ತಿಳಿಸಿದ್ದು, ಆರೋಪಿಯನ್ನು ವಿಚಾರಿಸಲಾಗಿ ಆತನ ಹೆಸರು ಮೊಹಮದ್ ಸಾಧಿಕ್ ಅಲಿಯಾಸ್ ಅಲೀಂ ಖಾನ್ ಬಿನ್ ಹುಸ್ಸೇನ್ ಖಾನ್, ರಾಜೀವ್ ಗಾಂಧಿ ನಗರ, ತುಮಕೂರು ಟೌನ್, ಹಾಲಿ ವಾಸಃ ಪೇಶ್ವಾ ಮೊಹಲ್ಲಾ ಶಿರಾ ಟೌನ್ ಎಂದು ಆಗಿದ್ದು, ಈತನು ಆಯೂಬ್ ಖಾನ್ ರವರ ಹೆಸರಿನಲ್ಲಿ ನಕಲಿ ಮತದಾನ ಮಾಡಿದ್ದಾನೆ ಎಂದು ಖಚಿತಪಡಿಸಿಕೊಂಡು ಚಾ.ಸಾ.1 ರವರು ಈ ಬಗ್ಗೆ ದೂರನ್ನು ನೀಡಿದ್ದು, ಸದರಿ ವಿಚಾರವನ್ನು ಪೊಲೀಸರಿಗೆ ನನ್ನ ಹೇಳಿಕೆಯಲ್ಲಿ ತಿಳಿಸಿರುತ್ತೇನೆ ಎಂದರೆ ಸರಿ. ಸುಮಾರು ವರ್ಷಗಳಾದ ಕಾರಣ ನನ್ನ ಮುಖ್ಯವಿಚಾರಣೆಯಲ್ಲಿ ನೆನಪಿಲ್ಲದೇ ಸರಿಯಾಗಿ ಸಾಕ್ಷಿಯ ವಿಚಾರಣೆ ಹೇಳಲು ಸಾಧ್ಯವಾಗಿರವುದಿಲ್ಲ ಎಂದರೆ ಸರಿ.

**ಪಾಟೀಸವಾಲುಃ- ಆರೋಪಿ ಪರ ಶ್ರೀ ಜಿ.ಎಸ್.ಎಸ್. ವಕೀಲರಿಂದಃ**

1. ಚುನಾವಣೆಯ ಪೂರ್ವದಲ್ಲಿ ನಮಗೆ ತರಬೇತಿ ನೀಡಲಾಗಿರುತ್ತದೆ ಎಂದರೆ ಸರಿ. ನಾವು ಎಲ್ ಆಕಾರದಲ್ಲಿ ಟೇಬಲ್ ಹಾಕಿದ್ದು, ಪಿ.ಆರ್.ಓ ಗೆ ಬೇರೆ ಟೇಬಲ್ ಹಾಕಲಾಗಿರುತ್ತದೆ. ಪಿ.ಆರ್.ಓ ಒಬ್ಬರು ಇದ್ದು, ಎ.ಪಿ.ಆರ್.ಓ 4 ಜನ ಇದ್ದೆವು. ಚಾ.ಸಾ.1 ರವರು ಪಿ.ಓ ಆಗಿದ್ದು, 1 ನೇ ಪೊಲಿಂಗ್ ಆಫೀಸರ್ ಚಾ.ಸಾ.1 ರವರು ಆಗಿದ್ದು, ಚಾ.ಸಾ.4 ರವರು 3 ನೇ

ಪೋಲಿಂಗ್ ಆಫೀಸರ್ ಆಗಿದ್ದು, ನಾನು 4 ನೇ ಪೋಲಿಂಗ್ ಆಫೀಸರ್ ಆಗಿದ್ದೆನು. 2 ನೇ ಪೋಲಿಂಗ್ ಆಫೀಸರ್ ರವರು ಯಾರು ಎಂದು ನನಗೆ ಗೊತ್ತಿಲ್ಲ. 1 ನೇ ಪೋಲಿಂಗ್ ಆಫೀಸರ್ ಮತದಾರರ ವಯಸ್ಸು, ಛಾಯಾ ಚಿತ್ರವನ್ನು ನೋಡಿ ಅವರ ಮಾರ್ಕಡ್ ಕಾಪಿಯಲ್ಲಿ ಮತದಾರರ ಸಂಖ್ಯೆಯನ್ನು ಗುರುತುಮಾಡಿಕೊಳ್ಳುತ್ತಾರೆ ಎಂದರೆ ಸರಿ. ಮತದಾನ ಮಾಡಲು ಬಂದ ವ್ಯಕ್ತಿಯನ್ನು ಅವರೇ ಗುರುತಿಸುತ್ತಾರೆ ಎಂದರೆ ಸಾಕ್ಷಿಯು ಅವರು ಮತ್ತು ಏಜೆಂಟ್ ರವರು ಗುರುತು ಮಾಡುತ್ತಾರೆ ಎಂದು ನುಡಿಯುತ್ತಾರೆ.

2. 2 ನೇ ಪೋಲಿಂಗ್ ಆಫೀಸರ್ ರವರು ಮತದಾರರ ಕೈಗೆ ಶಾಹಿ ಹಾಕಿ ನಮೂನೆ 17 ರ ಕೌಂಟರ್ ಫೈಲ್ ನಲ್ಲಿ ಮತದಾರರ ಸಹಿ ಪಡೆದು ಅದರ ಎಪಿಕ್ ಸಂಖ್ಯೆ ಯನ್ನು ಪಡೆಯುತ್ತಾರೆ ಎಂದರೆ ಸಾಕ್ಷಿಯು ನಾನು 1 ಮತ್ತು 4 ನೇ ಪೋಲಿಂಗ್ ಆಫೀಸರ್ ಕೆಲಸವನ್ನು ಮಾತ್ರ ಮಾಡಿದ್ದು, 2 ನೇ ಪೋಲಿಂಗ್ ಆಫೀಸರ್ ರವರ ಕರ್ತವ್ಯವನ್ನು ನಾನು ಮಾಡಿಲ್ಲದೇ ಇರುವ ಕಾರಣ ಆ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ.

3. 3 ನೇ ಪೋಲಿಂಗ್ ಆಫೀಸರ್ ರವರು ಕೌಂಟರ್ ಸಹಿ ಹಾಕಿಸಿ ವರ್ಕ್ ಶೀಟನ್ನು ಹಿರಿದು 4 ನೇ ಪೋಲಿಂಗ್ ಆಫೀಸರ್ ರವರಿಗೆ ಕೊಡುತ್ತಾರೆ, 4 ನೇ ಪೋಲಿಂಗ್ ಆಫೀಸರ್ ಆದ ನಾನು ಸದರಿ ಸ್ಲಿಪ್ ನ್ನು ಪಡೆದು ನಂತರ ಬ್ಯಾಲೆಟ್ ನ್ನು ಮತ ಚಲಾಯಿಸಲು ಮತದಾರರಿಗೆ ಅವಕಾಶವನ್ನು ಕೊಡುತ್ತೇನೆ. ಚಾಲೆಂಜಿಂಗ್ ಮತದ ಬಗ್ಗೆ ನನಗೆ ಮಾಹಿತಿ ಇಲ್ಲ ಯಾರಾದರೂ ಪೋಲಿಂಗ್ ಏಜೆಂಟ್ ನ್ನು ಒಬ್ಬ ಮತದಾರರ ಗುರುತನ್ನು ತಕರಾರು ಮಾಡಿದ್ದಲ್ಲಿ ಅವರು ಪಿ.ಆರ್.ಓ ಬಳಿ 2 ರೂಪಾಯಿಗಳನ್ನು ಕೊಟ್ಟು ರಸೀದಿಯನ್ನು ಪಡೆಯಬೇಕು ಎಂದರೆ ಸರಿ. ಸದರಿ ರಸೀದಿಯನ್ನು ಪಡೆದ ನಂತರ ಮತದಾರರ ಬಗ್ಗೆ ವಿಚಾರಿಸಲಾಗಿ, ಸದರಿ ಮತದಾರರು ಸುಳ್ಳು ಎಂದು ತಿಳಿದುಬಂದಲ್ಲಿ 2 ರೂಪಾಯಿಗಳ ರಸೀದಿಯನ್ನು ಪೋಲೀಂಗ್ ಏಜೆಂಟ್ ರವರನ್ನು ವಾಪಸ್ಸು ಕೊಟ್ಟು ಮತದಾರರು ನಕಲಿಯಾದಲ್ಲಿ ಅವರನ್ನು ಅಭಿರಕ್ಷೆಗೆ ತೆಗೆದುಕೊಳ್ಳುತ್ತಾರೆ ಎಂದರೆ ಇರಬಹುದು ಎಂದು ಸಾಕ್ಷಿ ನುಡಿಯುತ್ತಾರೆ.

4. ಆ ದಿನ ಯಾವುದೇ ಪೋಲಿಂಗ್ ಆಫೀಸರ್ 2 ರೂಪಾಯಿಗಳನ್ನು ಕೊಟ್ಟು ರಸೀದಿಯನ್ನು ಪಡೆದು ಆರೋಪಿಯ ಮತವನ್ನು ಚಾಲೆಂಜ್ ಮಾಡಿರುವ ಬಗ್ಗೆ ನನಗೆ ಗೊತ್ತಿಲ್ಲ. ಆರೋಪಿ ಮತದಾನ ಮಾಡಿ ಹೊರಗೆ ಹೋದ 5 ನಿಮಿಷದಲ್ಲಿ ಆರೋಪಿ ನಕಲು ಮತ ಮಾಡಿದ್ದಾನೆ ಎಂದು ಏಜೆಂಟ್ ತಿಳಿಸಿದ್ದರು. ಆ ರೀತಿ ನಕಲಿ ಮತ ಚಲಾಯಿಸಿದ್ದಾರೆ ಎಂದು ಆರೋಪ

ಮಾಡಿದ ಏಜೆಂಟ್ ಹೆಸರು ನನಗೆ ಗೊತ್ತಿಲ್ಲ. ಎಷ್ಟು ಜನ ಪೋಲೀಂಗ್ ಏಜೆಂಟ್ ಗಳು ಕುಳಿತಿದ್ದರು ಎಂದು ನನಗೆ ಗೊತ್ತಿಲ್ಲ, ಆರೋಪಿಯನ್ನು ನಾನು ಮೊದಲ ಬಾರಿ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ.

5. ಆರೋಪಿಗೆ 30-35 ವರ್ಷ ವಯಸ್ಸೂಗಿದೆ ಎಂದರೆ ನನಗೆ ಅದನ್ನು ಹೇಳಲು ಸಾಧ್ಯವಿಲ್ಲ. ಸದರಿ ದಿನ ಆರೋಪಿಯು ಯಾವುದೇ ಮತವನ್ನೂ ಚಲಾಯಿಸಿಲ್ಲ ಮತ್ತು ಹೊರಗಡೆ ಬಂದಿಲ್ಲ ಎಂದರೆ ಸರಿಯಲ್ಲ. ಆರೋಪಿಯು ಬೇರೆಯವರ ಹೆಸರಿನಲ್ಲಿ ನಕಲಿ ಮತ ಚಲಾಯಿಸಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯನ್ನು ನಕಲಿ ಮತದಾನ ಮಾಡಿರುವ ಬಗ್ಗೆ ಪೋಲಿಂಗ್ ಆಫೀಸರ್ ಅಭಿರಕ್ಷೆಗೆ ತೆಗೆದುಕೊಂಡಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಸಮಯದಲ್ಲಿ ಆರೋಪಿಯ ಮಾವನವರು ಕಾಂಗ್ರೆಸ್ ಪಕ್ಷದಲ್ಲಿ ಚುನಾವಣೆಗೆ ನಿಂತಿದ್ದು, ಬಿ.ಜೆ.ಪಿ. ರವರ ಮಾತುಕೇಳಿಕೊಂಡು ಆರೋಪಿಯ ವಿರುದ್ಧ ಸುಳ್ಳು ಪ್ರಕರಣವನ್ನು ದಾಖಲು ಮಾಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ಉಕ್ತಲೇಖನವನ್ನು ತರೆದ ನ್ಯಾಯಾಲಯದಲ್ಲಿ ಕಂಪ್ಯೂಟರ್ ಗೊಳಿಸಿ ದಾಖಲಿಸಿ ಪ್ರಿಂಟ್ ತೆಗೆಯಲಾಯಿತು)

**ಓದಿ ಹೇಳಿ ಕೇಳಿ ಸರಿ ಇದೆ,**

**ಹಿರಿಯ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ, ಶಿರಾ.**